# ಕನ್ನಡ ಅಭಿವೃದ್ಧಿ ಪ್ರಾಧಿಕಾರವು ೨೦೦೮-೦೯ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮದ ಪ್ರಗತಿಯ ವಿವರ

| ಒಂದು ವರ್ಷದ ಅವಧಿಯಲ್ಲಿ ಮಂಜೂರಾದ ಕಾರ್ಯಕ್ರಮಗಳು | ಮಂಜೂರಾದ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಅನುಷ್ಠಾನದ ಸದ್ಯದ ಹಂತ | ಅಭಿವೃದ್ಧಿ ಕಾರ್ಯಕ್ರಮಗಳ ಆರ್ಥಿಕ ಮತ್ತು ಭೌತಿಕ ಪ್ರಗತಿ ಹಾಗೂ ಯೋಜನಾ ವೆಚ್ಚದ ಸಾಧನೆ |
|---|---|---|
| ಸರ್ಕಾರದ ಆದೇಶ ಸಂಖ್ಯೆ: ಕಂಸವಾಪ್ರ/೪೫/ಕೆಒಎಲ್/೦೮ ದಿ:೧೬.೧೦.೨೦೦೮ ಮತ್ತು ೨೭. ೧೧.೦೮ರಲ್ಲಿ ರಾಜ್ಯದ ಕನ್ನಡ ಅನುಷ್ಠಾನ, ನ್ಯಾಯಾಂಗದಲ್ಲಿ ಕನ್ನಡ, ಗಡಿ ಜಿಲ್ಲೆಗಳಲ್ಲಿ ಗಡಿ ಉತ್ಸವ, ಕನ್ನಡ ಮಾಧ್ಯಮ ಪ್ರಶಸ್ತಿ, ನಮ್ಮ ನಾಡು ನಮ್ಮ ನುಡಿ, ಕಲಿಸವಿಗನ್ನಡ, ಪುಸ್ತಕ ಗಳ ಮರುಮುದ್ರಣ ಈ ರೀತಿ ಅಂದಾಜು ೧೬ ಕಾರ್ಯಕ್ರಮ ಗಳನ್ನು ನಡೆಸಲು ಮಂಜೂರಾತಿ ನೀಡಿ ಪ್ರಾಧಿಕಾರಕ್ಕೆ ಅನುದಾನ ವಾಗಿ ರೂ.೪೦೦ ಲಕ್ಷ ಮತ್ತು ಪ್ರಾಧಿಕಾರದ ಖಾತೆಯಲ್ಲಿ ಬಾಕಿ ಉಳಿದ ರೂ.೧೩೧ ಲಕ್ಷ ಒಟ್ಟು ರೂ.೫೩೧ ಲಕ್ಷಗಳಿಗೆ ಕಾರ್ಯ ಕ್ರಮಗಳನ್ನು ರೂಪಿಸಲಾಗಿದೆ. ಮತ್ತು ಸರ್ಕಾರದಿಂದ ಮೇಲ್ಕಂಡ ಆದೇಶದಲ್ಲಿ ಮಂಜೂರಾತಿ ದೊರೆತಿದೆ. | ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಶಾಸ್ತ್ರೀಯ ಭಾಷೆಗಾಗಿ ಕನ್ನಡ, ಪ್ರಾಚೀನತೆ ಮತ್ತು ಪ್ರಭುತ್ವ ವಿಚಾರ ಸಂಕೀರಣ ನಡೆಸಲಾಗಿದೆ.<br><br>೨೦೦೮-೦೯ನೇ ಸಾಲಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮುಂದುವರೆದ ಯೋಜನಾ ಕಾರ್ಯಕ್ರಮಗಳಾದ ಕನ್ನಡ ಭಾಷಾ ಬಳಕೆ ಕಾರ್ಯಾಗಾರ, ನಮ್ಮ ನಾಡು ನಮ್ಮ ನುಡಿ, ಕಲಿಸವಿ ಗನ್ನಡ, ಕನ್ನಡ ಬಾರದವರಿಗೆ ಕನ್ನಡ ಕಲಿಸುವ ಕಾರ್ಯಕ್ರಮ, ಕನ್ನಡ ಡಿಂಡಿಮ (ಪ್ರಖ್ಯಾತ ಕವಿಗಳ ನಾಡಗೀತೆಗಳ ಗಾಯನ) ೧೬ ಗಡಿಜಿಲ್ಲೆಗಳಲ್ಲಿ ಹಾಗೂ ೫೨ ಗಡಿ ತಾಲ್ಲೂಕುಗಳಲ್ಲಿ ಗಡಿ ಉತ್ಸವ ನಡೆಸಿ ಕನ್ನಡ ಜಾಗೃತಿ ಸಮಾವೇಶ ನಡೆಸಲು ರೂ.೨೯.೯೮ ಲಕ್ಷಗಳ ಅನುದಾನವನ್ನು ರಾಜ್ಯದ ೨೯ ಜಿಲ್ಲಾ ಸಹಾಯಕ ನಿರ್ದೇಶಕರುಗಳಿಗೆ ಮುಂಗಡ ಮಂಜೂರು ಮಾಡಿದೆ.<br><br>**"ನ್ಯಾಯಾಂಗದಲ್ಲಿ ಕನ್ನಡ"** ಎಂಬ ಕಾರ್ಯಕ್ರಮದಡಿಯಲ್ಲಿ ಕನ್ನಡದಲ್ಲಿ ತೀರ್ಪು ನೀಡಿದ ರಾಜ್ಯದ ೫೪ ಜಿಲ್ಲಾ ನ್ಯಾಯಾಧೀಶರುಗಳಿಗೆ ದಿನಾಂಕ:೧೭-೮-೨೦೦೮ರಂದು ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ಇಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಸಮ್ಮುಖದಲ್ಲಿ ಸಮಾರಂಭ ಏರ್ಪಡಿಸಿ ಸನ್ಮಾನಿತ ನ್ಯಾಯಾಧೀಶರುಗಳಿಗೆ ರೂ.೧೦,೦೦೦/-ಗಳ ಗೌರವ ಸಂಭಾವನೆ, ಪ್ರಶಸ್ತಿ ಪತ್ರ ಮತ್ತು ಪ್ರಶಸ್ತಿ ಫಲಕವನ್ನು ನೀಡಿ ಗೌರವಿಸಲಾಯಿತು.<br><br>**"ಕನ್ನಡ ಅನುಷ್ಠಾನ ವರ್ಷ"** ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿ ಯವರಿಂದ ದಿನಾಂಕ:೧-೧-೨೦೦೯ ರಂದು ಘೋಷಣೆಪಡಿಸಿ ರಾಜ್ಯದ ಜಿಲ್ಲಾ ಕಛೇರಿ, ಶಿಕ್ಷಣ ಇಲಾಖೆ, ನಗರಸಭೆ/ಪುರಸಭೆ ಹಾಗೂ ಇತರೆ ಸರ್ಕಾರಿ ಕಾರ್ಯಾಲಯಗಳಿಗೆ **ಕನ್ನಡದ ೭ ಸೂಕ್ತಿ** ಗಳ ಭಿತ್ತಿಪತ್ರ, ಅಂಟುಚೀಟಿ ಮತ್ತು ಕೈಪಿಡಿ(ದಾರಿದೀವಿಗೆ)ಗಳನ್ನು ಮುದ್ರಿಸಿ ಕನ್ನಡ ಅಭಿವೃದ್ಧಿ ಪಡಿಸುವ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. | ಸದರಿ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ಒಟ್ಟು ಮೊತ್ತ ರೂ.೧.೦೦ ಲಕ್ಷ<br><br>ಸದರಿ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ಒಟ್ಟು ಮೊತ್ತ ರೂ.೨೯.೯೮ ಲಕ್ಷ<br><br>ಸದರಿ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ಒಟ್ಟು ಮೊತ್ತ ರೂ.೭.೯೧ ಲಕ್ಷ<br><br>ಸದರಿ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ಒಟ್ಟು ಮೊತ್ತ ರೂ. ೧೯,೦೪,೯೪೦.೦೦<br><br>ಸದರಿ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ಒಟ್ಟು ಮೊತ್ತ ರೂ.೨,೧೪,೪೫೬.೦೦ |

| | | |
|---|---|---|
| | ದಿನಾಂಕ: ೬-೧-೨೦೦೯ರಂದು **"ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು"** ಎಂಬ ಪುಸ್ತಕ ಬಿಡುಗಡೆ ಸಮಾರಂಭ ವನ್ನು ಬೆಂಗಳೂರಿನ ಸಂಸಾ ಬಯಲು ರಂಗಮಂದಿರದಲ್ಲಿ ವಿಧಾನ ಸಭೆಯ ಸಭಾಧ್ಯಕ್ಷರ ಸಮ್ಮುಖದಲ್ಲಿ ಏರ್ಪಡಿಸಲಾಗಿತ್ತು. | ಸದರಿ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ಒಟ್ಟು ಮೊತ್ತ ರೂ.೭.೬೦,೦೦೦ |
| | ರಾಜ್ಯಕ್ಕೆ ಹೊಂದಿಕೊಂಡಿರುವ ಹೊರ ರಾಜ್ಯಗಳಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಕನ್ನಡದಲ್ಲಿ ಎಂ.ಎ, ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಲು ಪ್ರಥಮ ಬಾರಿಗೆ **"ವಿದ್ಯಾರ್ಥಿ ವೇತನ"** ವನ್ನು ನೀಡಲು ಉದ್ದೇಶಿಸಿದ್ದು, ಅದರಂತೆ ಒಟ್ಟು ೬ ವಿಶ್ವವಿದ್ಯಾಲಯಗಳಿಂದ ೩೩ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ.೨,೦೦೦/-ಗಳ ವಿದ್ಯಾರ್ಥಿ ವೇತನವನ್ನು (ಎರಡು ಕಂತುಗಳಲ್ಲಿ) ವಿತರಿಸುವ ಕಾರ್ಯಕ್ರಮವನ್ನು ದಿನಾಂಕ: ೯-೧-೨೦೦೯ರಂದು ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. | ಸದರಿ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ಒಟ್ಟು ಮೊತ್ತ ರೂ. ೬,೬೯,೭೫೦.೦೦ |
| | **"ಗಡಿನಾಡು ಉತ್ಸವ"** ಕಾರ್ಯಕ್ರಮವನ್ನು ಉತ್ತರ ಕನ್ನಡ ಜಿಲ್ಲೆಯ **"ಜೋಯಿಡಾ"** ದಲ್ಲಿ ದಿನಾಂಕ:೧೬ ಮತ್ತು ೧೭-೧-೨೦೦೯ರ ಎರಡು ದಿನಗಳ ರಾಜ್ಯಮಟ್ಟದ ಗಡಿ ಸಮಾವೇಶವನ್ನು ಏರ್ಪಡಿಸಿ ೫೨ ಗಡಿ ತಾಲ್ಲೂಕುಗಳಿಂದ ತಲಾ ಮೂರು ಪ್ರತಿನಿಧಿ/ ಪ್ರತಿ ಜಿಲ್ಲೆಯಿಂದ ಕನ್ನಡ ಜಿಲ್ಲಾ ಪ್ರತಿನಿಧಿಗಳನ್ನು ಆಹ್ವಾನಿಸಿ ಗಡಿಭಾಗದ ಬಗ್ಗೆ ಜಾಗೃತಿ ಮೂಡಿಸುವ ಗೋಷ್ಠಿ, ಸಂವಾದ ನಡೆಸಿ ಗಡಿನಾಡಿನ ಕುಂದುಕೊರತೆಗಳ ಬಗ್ಗೆ ಒಂದು ಸಂಕ್ಷಿಪ್ತ ವರದಿಯನ್ನು ತಯಾರಿಸಿ ಸರ್ಕಾರದ ಗಮನಕ್ಕೆ ತರಲಾಗಿದೆ. | ಸದರಿ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ಒಟ್ಟು ಮೊತ್ತ ರೂ. ೩೪,೩೮,೦೧೨.೦೦ |
| | ಕನ್ನಡ ಮಾಧ್ಯಮ ಪ್ರಶಸ್ತಿ ಸಮಾರಂಭದಡಿಯಲ್ಲಿ ರಾಜ್ಯದ ಪ್ರತಿ ಜಿಲ್ಲೆಗಳಿಂದ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ತರಗತಿಯನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ **ಪಿ.ಯು.ಸಿ** ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ **೩೯ ವಿದ್ಯಾರ್ಥಿಗಳು, ೬೫ ವಿದ್ಯಾರ್ಥಿನಿಯರು** ಒಟ್ಟು **೧೦೪** ವಿದ್ಯಾರ್ಥಿಗಳು ಮತ್ತು **ಎಸ್.ಎಸ್.ಎಲ್.ಸಿ** ಯಲ್ಲಿ **೧೦೭ ವಿದ್ಯಾರ್ಥಿಗಳು, ೧೦೦ ವಿದ್ಯಾರ್ಥಿನಿ**ಯರು ಒಟ್ಟು **೩೧೧** ವಿದ್ಯಾರ್ಥಿಗಳಿಗೆ ಪ್ರಶಸ್ತಿ ಸಮಾರಂಭವನ್ನು ಏರ್ಪಡಿಸಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಪ್ರಥಮ ಸ್ಥಾನಕ್ಕೆ ರೂ.೧೦,೦೦೦/- ದ್ವಿತೀಯ ಸ್ಥಾನಕ್ಕೆ ರೂ.೮,೦೦೦/- ಹಾಗೂ ತೃತೀಯ ಸ್ಥಾನಕ್ಕೆ ರೂ.೬,೦೦೦/- ಗಳ ಪ್ರೋತ್ಸಾಹ ಧನ, ಸ್ಮರಣಿಕೆ, ಅಭಿನಂದನಾ ಪತ್ರ, ಕೈಗಡಿಯಾರ, ನಿಘಂಟು, ಪೆನ್ ಹಾಗೂ ಶಾಲಾಬ್ಯಾಗು ಗಳನ್ನು ವಿತರಿಸಲು ಸಮಾರಂಭವನ್ನು ಗಣ್ಯ ವ್ಯಕ್ತಿಗಳ | ಕನ್ನಡ ಗಡಿ ಭವನದ |

| | | |
|---|---|---|
| | ಸಮ್ಮುಖದಲ್ಲಿ ದಿನಾಂಕ: ೧೦-೨-೨೦೦೯ರಂದು ಏರ್ಪಡಿಸಲಾಗಿತ್ತು. ಸದರಿ ಸಮಾರಂಭಕ್ಕೆ ಆಗಮಿಸಿದ ವಿದ್ಯಾರ್ಥಿ ಹಾಗೂ ಅವರ ಪೋಷಕರುಗಳಿಗೆ ಪ್ರಯಾಣ ಭತ್ಯೆಯನ್ನು ಸಹ ನೀಡಲಾಗಿದೆ.<br><br>ರಾಜ್ಯದಲ್ಲಿನ ಗಡಿ ಜಿಲ್ಲೆ/ತಾಲ್ಲೂಕುಗಳಾದ ಮಧುಗಿರಿ, ಕುರಣಿ, ಹುಕ್ಕೇರಿ ತಾಲ್ಲೂಕು, ಬಳ್ಳಾರಿ, ಅಂಕೋಲಾ, ಸಂಕೇಶ್ವರ, ಸಿರಗುಪ್ಪ, ಜೋಯಿಡಾ, ಗೌರಿಬಿದನೂರಿನಲ್ಲಿ ಕನ್ನಡ ಗಡಿ ಭವನ ನಿರ್ಮಾಣಕ್ಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ವಂತಿಗೆಯಾಗಿ ತಾಲ್ಲೂಕು ಕೇಂದ್ರಕ್ಕೆ ರೂ.೫.೦೦ ಲಕ್ಷ ಹಾಗೂ ಜಿಲ್ಲಾ ಕೇಂದ್ರಕ್ಕೆ ರೂ.೭.೦೦ ಲಕ್ಷಗಳ ಧನ ಸಹಾಯವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮೂಲಕ ಬಿಡುಗಡೆ ಮಾಡಿದೆ.<br>ಎಲ್ಲಾ ಇಲಾಖಾ ವಾಹನಗಳ ನೊಂದಣಿ ಸಂಖ್ಯೆಗಳನ್ನು ಕನ್ನಡದಲ್ಲಿಯೇ ಬರೆಸುವ ಬಗ್ಗೆ ಎಲ್ಲಾ ಇಲಾಖೆಯ ಅಧಿಕಾರಿ ಗಳಿಗೆ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿದೆ. ಇದನ್ನು ಬಹುತೇಕ ಕಡೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.<br><br>ಕನ್ನಡ ನಾಮಫಲಕಗಳನ್ನು ಅಳವಡಿಸದಿದ್ದವರಿಗೆ ರೂ.೧೦,೦೦೦ ದಂಡ ವಿಧಿಸಲು ಹೊಸ ಆದೇಶ ಹೊರಡಿಸಲಾಗಿದೆ.<br><br>ಅನುಷ್ಠಾನ ವರ್ಷದ ಪ್ರಯುಕ್ತ ಅಂಟು ಚೀಟಿ, ಭಿತ್ತಿಪತ್ರ ಮತ್ತು ದಾರಿದೀವಿಗೆ ಎಂಬ ಹೆಸರಿನ ಕೈಪಿಡಿಗಳನ್ನು ಹೊರತರ ಲಾಗಿದ್ದು, ಇದನ್ನು ರಾಜ್ಯದ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಪ್ರದರ್ಶಿಸಲು ಮತ್ತು ಎಲ್ಲಾ ಸಿಬ್ಬಂದಿಗೆ ವಿತರಣೆ ಮಾಡುವಂತೆ ಕೋರಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ.<br><br>ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಕನ್ನಡ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಾಗಿದೆ.<br><br>ಕನ್ನಡದ ವಿಷಯದಲ್ಲಿ ನಿರ್ಲಕ್ಷ್ಯವನ್ನು ತೋರಿದ್ದ ಸುಮಾರು ೩೮ ವಿವಿಧ ಅಧಿಕಾರಿಗಳಿಗೆ ಶಿಸ್ತು ಕ್ರಮಕ್ಕೆ ಒತ್ತಾಯಿಸಿ ಪತ್ರ ಬರೆಯಲಾಗಿದೆ.<br><br>ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಮೆಟ್ರೋ ನಿಗಮದಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವಂತೆ ಕೋರಿ ಪತ್ರ ಬರೆಯಲಾಗಿದೆ. | ಕಟ್ಟಡ ನಿರ್ಮಾಣಕ್ಕೆ ಒಟ್ಟು ಮೊತ್ತ ರೂ. ೪೨.೦೦ ಲಕ್ಷ |

| | | |
|---|---|---|
| | ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಂತರ್ಜಾಲ ತಾಣವನ್ನು ಕಾಲೋಚಿತಗೊಳಿಸಲಾಗಿದೆ. (www.karunadu.gov.in/kannada-praadhikaara) | |

ಕಾರ್ಯದರ್ಶಿ
ಕನ್ನಡ ಅಭಿವೃದ್ಧಿ ಪ್ರಾಧಿಕಾರ

C.M